8	ಕಾಗವಾಡ	00	03
9	ಬೆಳಗಾವಿ	00	01
10	ಬೆಳಗಾವಿ ತಾಲ್ಲೂಕು	02	01
11	ಖಾನಾಪುರ	02	02
12	ರಾಮದುರ್ಗಾ	00	00
13	ಬೈಲಹೊಂಗಲ	25	12
14	ಸವದತ್ತಿ	00	00

ಸವದತ್ತಿ ತಾಲ್ಲೂಕಿನ ಹಿರೇಬೂದನೂರು ಗ್ರಾಮದಲ್ಲಿರುವ ಆರ್ಯುವೇದಿಕ ಆಸ್ಪತ್ರೆಗೆ ಕಟ್ಟಡವನ್ನು ಕಟ್ಟುವುದು

1741 (2026) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹಿರೇಬೂದನೂರ ಗ್ರಾಮಗಳಲ್ಲಿರುವ ಆಯುರ್ವೇದಿಕ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಆಸ್ಪತ್ರೆಗಳಿಗೆ ಕಟ್ಟಡಗಳನ್ನು ಕಟ್ಟಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ನಫೀಸ್ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು)

ಅ) ಬಂದಿದೆ.

ಆ) ಇದು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು ನಿಯಮಾನುಸಾರ ಕಟ್ಟಡದ ನಿರ್ಮಾಣಕ್ಕೆ ಉಚಿತ ನಿವೇಶನವನ್ನು ಗ್ರಾಮ ಪಂಚಾಯತ್ ವತಿಯಿಂದ ನೀಡಿದಲ್ಲಿ ಕಟ್ಟಡ ನಿರ್ಮಾಣಕ್ಕೆ ಜಿಲ್ಲಾ ಪಂಚಾಯತ್ ಅವಶ್ಯ ಆಯವ್ಯಯವನ್ನು ಒದಗಿಸಿದ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಸಿಬ್ಬಂದಿಯ ನೇಮಕಾತಿ

1742 (2089) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಇಲಾಖೆಯಲ್ಲಿ ವಾಹನ ಚಾಲಕರ ಹುದ್ದೆಯಲ್ಲಿ ಹಾಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುವ ಚಾಲಕರುಗಳ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ವಾಹನ ಚಾಲಕರ ಹುದ್ದೆಯನ್ನು ಭರ್ತಿ ಮಾಡಲು ಅನುಸರಿಸಲಾಗುವ ನಿಯಮಗಳೇನು;

ಈ) ಈಗ ಹಾಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ವಾಹನ ಚಾಲಕರನ್ನು ಖಾಯಂಗೊಳಿಸಿದಲ್ಲಿ ಸದರಿ ಚಾಲಕರಿಗೆ ಹಾಗೂ ಇಲಾಖೆಗೆ ಅನುಕೂಲವಾಗುವುದಿಲ್ಲವೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮ ಏನು; (ವಿವರ ನೀಡುವುದು)

ಉ) ವಾಹನ ಚಾಲಕರ ಹುದ್ದೆಯ ನೇರ ನೇಮಕಾತಿಯ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಚಾಲಕರನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆಯೇ; ತೆಗೆದುಕೊಂಡಲ್ಲಿ ಯಾವ ರೀತಿ ಗಣನೆಗೆ ತೆಗೆದುಕೊಳ್ಳಲಾಗುವುದು; ಇಲ್ಲದೇ ಇದ್ದಲ್ಲಿ ಇವರಿಗೆ ಮುಂದಿನ ಮಾರ್ಗ ಸೂಚಿ ಏನು; (ವಿವರ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು)

ಅ) 629

ಆ) 384

ಇ) ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 89/ಎಸ್‌ಆರ್‌ಡಿ/01. ದಿನಾಂಕ 29-5-2002 ರಂತೆ ಭರ್ತಿ ಮಾಡಲಾಗುವುದು.

ಈ) ಗುತ್ತಿಗೆಯ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ವಾಹನ ಚಾಲಕರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಉ) ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ವಾಹನ ಚಾಲಕರು, ವಾಹನ ಚಾಲಕರ ಹುದ್ದೆಗಾಗಿ ಅರ್ಜಿ ಕರೆದಾಗ ಅರ್ಜಿ ಸಲ್ಲಿಸಿದಲ್ಲಿ ನಿಯಮಾನುಸಾರ ಆಯ್ಕೆ ಆಗಿದ್ದಲ್ಲಿ ನೇಮಕ ಮಾಡಲಾಗುವುದು.

ಸಂತೆಮರಳ್ಳಿ ಕ್ಷೇತ್ರದ ವ್ಯಾಪಿಯಲ್ಲಿ ಜಿಲ್ಲಾ ಆಸ್ಪತ್ರೆ ಹಾಗೂ ಹೆರಿಗೆ ಆಸ್ಪತ್ರೆಗಳ ಸಿಬ್ಬಂದಿ ಬಗ್ಗೆ

1745 (2113) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂತೇಮಾರ ಹಳ್ಳಿ ಕ್ಷೇತ್ರದ ವ್ಯಾಪ್ತಿಯ ಕುದೇರು, ಸಂತೇಮಾರನಹಳ್ಳಿ ಹಾಗೂ ಎಡತಲೆ ಗ್ರಾಮಗಳಿಗೆ ಹೆರಿಗೆ ಆಸ್ಪತ್ರೆ ಮಂಜೂರಾಗಿದ್ದು ಯಾವಾಗ; ಈ ಆಸ್ಪತ್ರೆಗಳು ಎಂದಿನಿಂದ ಕಾರ್ಯಾರಂಭಗೊಂಡಿದೆ;

ಆ) ಈ ಮೇಲ್ಕಂಡ ಹೆರಿಗೆ ಆಸ್ಪತ್ರೆಗಳಿಗೆ ಅಗತ್ಯ ಸಿಬ್ಬಂದಿಗಳನ್ನು ಒದಗಿಸಲಾಗಿದೆಯೇ (ವೈದ್ಯಾಧಿಕಾರಿಗಳ ಸಹಿತ) ಮಹಿಳಾ ವೈದ್ಯಾಧಿಕಾರಿಗಳು ಆತ್ಯಾವಶ್ಯಕವಲ್ಲವೇ; ಹಾಗಿದ್ದಲ್ಲಿ, ಈ ಮೂರು ಹೆರಿಗೆ ಆಸ್ಪತ್ರೆಗಳಿಗೆ ಸದರಿ ವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು? ಯಾವಾಗ ನೇಮಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ದಿನಾಂಕ 31-3-97ರಂದು ಸಂತೇಮಾರನಹಳ್ಳಿ, ಎಡತಲೆ ಗ್ರಾಮಗಳಿಗೆ ಹೆರಿಗೆ ಆಸ್ಪತ್ರೆ ಮಂಜೂರಾಗಿರುತ್ತದೆ. ಕುದೇರು ಹೆರಿಗೆ ಆಸ್ಪತ್ರೆ 15-9-66ರಿಂದ ಕಾರ್ಯಾರಂಭ ಮಾಡಿರುತ್ತದೆ.